

# ನ್ಯಾಯಕ್ಕಾಗಿ ಪಶು ಪಕ್ಷಿಗಳ ಅಹವಾಲು

ಕಾಂಚನಪುರದ ಮಲೆಗಳ ದಟ್ಟ ಕಾಡು ನಾಶವಾಗಿತ್ತು. ಪರಿಸರ ನಾಶ ಮಾಡುವ ಮತ್ತು ಮರಗಳನ್ನು ಕಡಿದು ಮಾರಾಟ ಮಾಡುವ ದುಷ್ಟರಿಂದ ಪ್ರಾಣಿಗಳೆಲ್ಲ ಕಂಗೆಟ್ಟಿದ್ದವು. ಮೇಲಾಗಿ ಆನೆದಂತಕ್ಕಾಗಿ ಆನೆಗಳನ್ನೂ, ಹುಲಿಚರ್ಮಕ್ಕಾಗಿ ಹುಲಿಗಳನ್ನೂ, ಮಾಂಸ ಮತ್ತಿತರ ಕಾರಣಗಳಿಗಾಗಿ ಇತರ ಪ್ರಾಣಿಗಳನ್ನೂ ದುಷ್ಟರು ಬೇಟೆಯಾಡತೊಡಗಿದ್ದರು. ಮರಗಳಿಲ್ಲದೇ ಮಳೆಯೂ ಕಮ್ಮಿಯಾಗಿ ಬರಗಾಲ ಕಾಲಿಟ್ಟು ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರೂ ಇಲ್ಲದಾಯಿತು.

ಆಗ ಪ್ರಾಣಿ ಪಕ್ಷಿಗಳೆಲ್ಲ ಒಂದು ದಿನ ಸಿಂಹದ ಅಧ್ಯಕ್ಷತೆಯಲ್ಲಿ ಸಭೆ ಸೇರಿದವು. 'ನಮ್ಮ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿರುವ ಮಾನವರ ಮೇಲೆ ಯುದ್ಧ ಸಾರಬೇಕು' ಎಂದು ಹುಲಿರಾಯ ಕೆಂಪಡರಿದ ಕಂಗಳಿಂದ ಘರ್ಜಿಸಿತು. ಆದರೆ ಅದು ಆಹಾರ ನೀರು ಇಲ್ಲದೆ ಪೇಲವವಾಗಿತ್ತು. ಘರ್ಜನೆ ಕ್ಷೀಣವಾಗಿತ್ತು. 'ಒಮ್ಮೆಲೇ ದುಡುಕುವುದು ತರವಲ್ಲ, ಪರ್ಯಾಯ ಮಾರ್ಗ ಹುಡುಕುವುದು ಒಳಿತು' ಎಂದು ಮೊಲ ತಣ್ಣಗೆ ಹೇಳಿತು. ಆನೆಗಳ ಮುಂದಾಳು ಗಜಪತಿ ಹೇಳಿತು, 'ಎಲ್ಲ ಮಾನವರೂ ದುಷ್ಟರಲ್ಲ. ನಮ್ಮನ್ನು ಸಾಕಿ ಸಲಹುವವರೂ ಇದ್ದಾರೆ. ಕಾಂಚನಪುರದ ವಿಧಾನಸಭೆಗೇ ಹೋಗಿ ಕೇಳೋಣ ಅಥವಾ ಕಾಂಚನಪುರದ ಮುಖ್ಯ ನ್ಯಾಯಾಲಕ್ಕೆ ಹೋಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ನ್ಯಾಯ ಕೋರೋಣ' ಎಂದು ಸಲಹೆ ನೀಡಿತು.

ಡಾಕ್ಟರ್ ಕರಡಿರಾಯರು ಅದಕ್ಕೆ ಅನುಮೋದನೆ ಸೂಚಿಸಿದರು. ನವಿಲು, ಕೋಗಿಲೆ, ಗಿಳಿ, ಹಂಸ, ಪಾರಿವಾಳ, ಜಿಂಕೆ, ಸಾರಂಗ, ತೋಳ, ಕಾಡುಕೋಣ ಹೀಗೆ ಎಲ್ಲವೂ ಅದಕ್ಕೆ ಚಪ್ಪಾಳೆ ತಟ್ಟಿ ಸಮ್ಮತಿ ಸೂಚಿಸಿದವು. ಅನಂತರ ಎಲ್ಲ ಪ್ರಾಣಿಪಕ್ಷಿಗಳೂ ಸೇರಿ ಸಾವಿರಾರು ಸಂಖ್ಯೆಯಲ್ಲಿ ವಿಧಾನ ಸೌಧ ಚಲೋ ಮೆರವಣಿಗೆ ಕೈಗೊಂಡವು.

ನಮ್ಮ ಕಾಡು ಬರಿದು ಬರಿದು
ಇಲ್ಲ ನೀರು, ಕೂಳು.
ನ್ಯಾಯ ಬೇಕು ನ್ಯಾಯ ಬೇಕು
ಕಸಿಯಬೇಡಿ ಬಾಳು.

ಎಂದು ಘೋಷಣೆ ಕೂಗುತ್ತ ವಿಧಾನ ಸೌಧದತ್ತ ಬರುತ್ತಿದ್ದಂತೆ ಜನರೆಲ್ಲ ಕಂಗಾಲಾಗಿ ಹೋದರು.

ಮುಖ್ಯಮಂತ್ರಿಗಳು ವಿದೇಶ ಪ್ರವಾಸದಲ್ಲಿದ್ದರು. ಅವರು ವಿದೇಶದಿಂದಲೇ ರಕ್ಷಣೆಯ ಬಗ್ಗೆ ಆಶ್ವಾಸನೆ ನೀಡಿದರು. ಅನಿರೀಕ್ಷಿತವಾಗಿ ಪ್ರಾಣಿ ಪಕ್ಷಿಗಳು ಮುತ್ತಿಗೆ ಹಾಕಿದ್ದರಿಂದ ರಕ್ಷಣಾ ವ್ಯವಸ್ಥೆ ಅಸ್ತವ್ಯಸ್ತವಾಯಿತು. ಎಲ್ಲರೂ ಪಲಾಯನ ಮಾಡಿಬಿಟ್ಟರು. ವಿಧಾನ ಸೌಧ ಬಿಕೋ ಎನ್ನುತ್ತಿತ್ತು. ಒಂಟೆ, ನ್ಯಾಯದ ಗಂಟೆ ಎಲ್ಲಿಯಾದರೂ ಇದೆಯೇ? ಎಂದು ಹುಡುಕಿತು. ಈಗ ಅದೆಲ್ಲ ಇರಲ್ಲ ಎಂದು ಅದಕ್ಕೆ ಅರಿವಾಯಿತು.

ಅನಂತರ ಒಳಗೆ ಪ್ರವೇಶಿಸಿದ ಪ್ರಾಣಿಪಕ್ಷಿಗಳು ಮನುಷ್ಯರಂತೆ ಸಭೆ ನಡೆಸಿದವು. ಸಿಂಹರಾಜರು ಸ್ಪೀಕರ್ ಸ್ಥಾನದಲ್ಲಿ ಕುಳಿತು ಸಭೆ ನಡೆಸಿದರು. ಯಾವುದೇ ಹಿಂಸಾತ್ಮಕ ಚಟುವಟಿಕೆ ನಡೆಸದೆ ಗಾಂಧೀಜಿಯವರ